# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

ಸಿ.ಸಿ. ನಂ. : 120/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಧಾಕರ | ಪಿ.ಡಬ್ಲ್ಯೂ: 6 |
| ತಂದೆಯ ಹೆಸರು | : | ಉಮಾಕಾಂತ ಗುನಗಿ | ಸಿ.ಡಬ್ಲ್ಯೂ: 6 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ಅಂಗಡಿಯಲ್ಲಿ ಕೆಲಸ | |
| ವಾಸ್ತವ್ಯ | : | ಸೋನಾರವಾಡಾ, ಕಾರವಾರ | |

ಸತ್ಯ ಪ್ರತಿಜ್ಞೆಯ ಮೇರೆಗೆಃ 27-07-2022

**ಕಲಂ. 299 ರಡಿಯಲ್ಲಿ ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ. ರವರಿಂದಃ**

ನನಗೆ ಚಾಸಾ.1 ಮತ್ತು 7 ರವರ ಪರಿಚಯ ಇಲ್ಲ. ಈಗ ನನಗೆ ಒಂದು ಅಮಾನತ್ತು ಪಂಚನಾಮೆಯನ್ನು ತೋರಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ದಿಃ 22-01-2017 ರ ಸ್ಥಳ ಪಂಚನಾಮೆ ಜೆರಾಕ್ಸ ಪ್ರತಿಯಾಗಿದ್ದು ನಿಷಾನೆಯಾಗಿ ಗುರುತಿಸಿಲ್ಲ. ನಾನು ಸದ್ರಿ ಪಂಚನಾಮೆಗೆ ದಿಃ 02-01-2017 ರಂದು ನಮ್ಮ ಮನೆಯಲ್ಲಿ ಕಳ್ಳತನ ಆದ ವಿಚಾರವಾಗಿ ಪೊಲೀಸ್ ಠಾಣೆಗೆ ದೂರು ಕೊಡಲು ಹೋದಾಗ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆದರೆ ಪೊಲೀಸರು ನನ್ನನ್ನು ಎಲ್ಲಿಗೂ ಕರೆಸಿಲ್ಲ, ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು )**

ಸಿ.ಸಿ. ನಂ. : 120/2022

ಪಿ.ಡಬ್ಲ್ಯೂ: 6 ಸಿ.ಡಬ್ಲ್ಯೂ:6

**ಪಾಟೀ ಸವಾಲುಃ ಹಿರಿಯ ಸ.ಸ.ಅ. ರವರಿಂದಃ**

ದಿಃ 22-01-2017 ರಂದು ಮದ್ಯಾಹ್ನ 12-45 ರಿಂದ 2-00 ಗಂಟೆ ತನಕ ಆರೋಪಿ ನಿಖಿಲ ಮಹೇಕರ ಇತನು ತಾನು ಕಳ್ಳತನ ಮಾಡಿದ ಸ್ಥಳವಾದ ಚಾಸಾ.1 ರವರ ಸಂಜೀವಿನಿ ಕ್ಲಿನಿಕ್ ಗೆ ಕರೆದುಕೊಂಡು ಹೋಗಿ ಗುನ್ಹೆ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನನ್ನ ಮತ್ತು ಚಾಸಾ.7 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ ಪಂಚನಾಮೆಯ ವಿವರಗಳನ್ನು ನನ್ನ ಓದಿ ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಸಹಿ ಮಾಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-
ಮುಖ್ಯ ನಾಯಿಕ ದಂಡಾಧಿಕಾರಿಗಳು,
ಕಾರವಾರ